# ತಾಯಿಯ ಹೆಸರು ಹೊರೆಯಾಗದು

# ಆರಾಧನಾ



'ನೆಪೊಟಿಸಂ' ಬಗೆಗಿನ ಚರ್ಚೆ ನಡುವೆಯೇ ಮತ್ತೊಬ್ಬ 'ಸ್ಟಾರ್ ಕಿಡ್' ಆರಾಧನಾ ಚಿತ್ರರಂಗಕ್ಕೆ ಪದಾರ್ಪಣೆ ಮಾಡುತ್ತಿದ್ದಾರೆ. ಮೊದಲ ಸಿನಿಮಾ 'ಕಾಟೇರ'ದಲ್ಲಿ ಸ್ಟಾರ್ ನಟ ದರ್ಶನ್ ಜೊತೆ ನಟಿ ಮಾಲಾಶ್ರೀ ಮಗಳು ಆರಾಧನಾ ಕಾಣಿಸಿಕೊಳ್ಳುತ್ತಿದ್ದಾರೆ.

ಸ್ಟಾರ್ ಮಕ್ಕಳು ಸಿನಿಮಾ ರಂಗಕ್ಕೆ ಬಂದರೆ, ಅವರ ತಂದೆ–ತಾಯಿಯೊಂದಿಗೆ ಹೋಲಿಕೆ ಮಾಡುವುದು ಸಹಜ. ಅಮ್ಮ ಅಪ್ಪನ ಪ್ರಭಾವಳಿಯಲ್ಲಿಯೇ ಅವರನ್ನು ಗುರುತಿಸುವುದು ಹೆಚ್ಚು. ಈ ಬಗ್ಗೆ ತಮಗೆ ಅರಿವಿರುವುದಾಗಿ ಹೇಳಿರುವ ಆರಾಧನಾ, 'ನಾನು ಮಾಲಾಶ್ರೀ ಮಗಳಾಗಿರುವುದಕ್ಕೆ ಅದೃಷ್ಟವಂತೆ ಎನಿಸುತ್ತದೆ. ನನ್ನ ತಾಯಿಯೊಂದಿಗೆ ನನ್ನನ್ನು ಹೋಲಿಕೆ ಮಾಡಿದರೆ ನಾನು ಅದನ್ನು ಆಶೀರ್ವಾದವೆಂದೇ ಭಾವಿಸುತ್ತೇನೆ. ಇದು ನನಗೆ ಹೊರೆ ಎನ್ನಿಸುವುದಿಲ್ಲ. ಇದರ ಬಗ್ಗೆ ಹೆಚ್ಚಾಗಿ ಚಿಂತಿಸದೇ ನನ್ನನ್ನು ನಾನು ಸಿನಿಮಾರಂಗದಲ್ಲಿ ಉತ್ತಮ ರೀತಿ ಸ್ಥಾಪಿಸಿಕೊಳ್ಳುವತ್ತ ಗಮನಹರಿಸುತ್ತೇನೆ' ಎಂದು ಹೇಳಿದ್ದಾರೆ.

'ಸಿನಿಮಾ ರಂಗದಲ್ಲಿ ಪೂರ್ಣ ಪರಿಶ್ರಮ ಹಾಕುತ್ತೇನೆ. ನನ್ನ ಕೆಲಸಕ್ಕೆ ನ್ಯಾಯ ಒದಗಿಸುತ್ತೇನೆ' ಎಂದಿದ್ದಾರೆ. ಮೊದಲು ಅನನ್ಯಾ ಆಗಿದ್ದ ಅವರು ನಂತರ ರಾಧನಾ ಎಂದು ಹೆಸರಿಟ್ಟುಕೊಂಡರು. ಈಚೆಗೆ ಆರಾಧನಾ ಎಂದು ಹೆಸರು ಬದಲಿಸಿಕೊಂಡಿದ್ದಾರೆ.

ಅಮ್ಮನ 'ಸ್ಟಾರ್‌ಡಂ' ಬಗ್ಗೆ ಮಾತನಾಡಿರುವ ಅವರು, 'ಅವರನ್ನು ಸ್ಟಾರ್ ಎನ್ನುವುದಕ್ಕಿಂತ ಅಮ್ಮನಾಗಿಯೇ ನಾನು ಕಂಡಿರುವುದು ಹೆಚ್ಚು. ಅವರು ಶೂಟಿಂಗ್‌ನಲ್ಲಿ ಹೆಚ್ಚು ಸಮಯ ಕಳೆಯುತ್ತಿದ್ದರೂ ಮನೆಗೆ ಬಂದಾಗ ನಮ್ಮೊಂದಿಗೆ ಸಂತೋಷದಿಂದ ಕಾಲ ಕಳೆಯುತ್ತಿದ್ದರು. ನಾನು ಸಿನಿಮಾರಂಗಕ್ಕೆ ಬಂದ ನಂತರ ಅವರ ಜನಪ್ರಿಯತೆ ಹೆಚ್ಚು ಗಮನಕ್ಕೆ ಬಂತು. ಸಿನಿಮಾ ರಂಗದಲ್ಲಿ ಅಮ್ಮ ಅಪ್ಪನಿಗೆ ಹಲವು ವರ್ಷಗಳ ಅನುಭವ. ಅದರಲ್ಲೇ ಜೀವನ ಕಂಡುಕೊಂಡವರು ಅವರು. ಪರಿಶ್ರಮ ಎಂದಿಗೂ ಉತ್ತಮ ಫಲ ನೀಡುತ್ತದೆ ಎಂಬುದನ್ನು ಅಪ್ಪ ತೋರಿದ್ದಾರೆ. ಪ್ಯಾಷನ್ ಅನ್ನು ದೃಢಮನಸ್ಸಿನಿಂದ ಪಾಲಿಸಬೇಕೆಂಬುದನ್ನು ಅಮ್ಮನಿಂದ ಕಲಿತಿದ್ದೇನೆ' ಎಂದು ಹೇಳಿಕೊಂಡಿದ್ದಾರೆ.



# ಯುದ್ಧಕಲೆಯ ಅಖಾಡದಲ್ಲಿ ಅಭಿಷೇಕ್ ಅಂಬರೀಶ್

ನಟ ಅಭಿಷೇಕ್ ಅಂಬರೀಶ್, ತಮ್ಮ ಮುಂದಿನ ಸಿನಿಮಾ 'ಎಎ04'ಗೆಂದು ಯುದ್ಧಕಲೆಯ ಅಭ್ಯಾಸದಲ್ಲಿ ಬ್ಯುಸಿಯಾಗಿದ್ದಾರೆ.

ಕೇರಳ ಮೂಲದ 'ಕಳರಿಪಯಟ್ಟು' ದೇಸಿ ಸಮರ ಕಲೆಯನ್ನು ತಮ್ಮ ಪಾತ್ರಕ್ಕಾಗಿ ಅಭಿಷೇಕ್ ಅಭ್ಯಾಸ ಮಾಡುತ್ತಿರುವುದಾಗಿ ತಿಳಿದುಬಂದಿದೆ. 10ನೇ ಶತಮಾನದ ರಾಜತಲೆಮಾರಿನ ಕಥೆಯನ್ನು ಈ ಸಿನಿಮಾ ಹೊಂದಿದ್ದು, ಅದಕ್ಕಾಗಿ ಭಾರೀ ಕಸರತ್ತು ನಡೆಸುತ್ತಿದ್ದಾರೆ. ಡಿಸೆಂಬರ್‌ನಲ್ಲಿ ಸಿನಿಮಾ ಚಿತ್ರೀಕರಣ ಆರಂಭವಾಗಲಿದೆ ಎಂದು ಮೂಲಗಳು ತಿಳಿಸಿವೆ.

ಸಿನಿಮಾದಲ್ಲಿ ಅಭಿಷೇಕ್‌ಗೆ ನಾಲ್ಕು ಲುಕ್‌ಗಳಿವೆ. ಅವರ ಮೇಕ್ ಓವರ್‌ಗೆ ಆದ್ಯತೆ ನೀಡಲಾಗಿದೆ. ಆ ಲುಕ್‌ಗಳಿಗೆ ಅವರು ಹೊಂದಿಕೆಯಾದರೆ, ಚಿತ್ರೀಕರಣ ಶೀಘ್ರವೇ ಆರಂಭವಾಗುವುದು.

ಲುಕ್‌ನೊಂದಿಗೆ ಚಿತ್ರಕ್ಕಾಗಿ ದೊಡ್ಡ ಮಟ್ಟದಲ್ಲಿ ದೈಹಿಕ ತರಬೇತಿಯನ್ನೂ ಪಡೆದುಕೊಳ್ಳುತ್ತಿದ್ದಾರೆ. ಎರಡು ತಿಂಗಳ ಅವಧಿ 'ಕಳರಿಪಯಟ್ಟು' ಕಲಿಯುತ್ತಿದ್ದಾರೆ. ಯುದ್ಧಕಲೆಯ ಭಾಗವಾಗಿ ಧ್ಯಾನವನ್ನೂ ಕಲಿಯುತ್ತಿದ್ದಾರೆ. ಈ ಸಿನಿಮಾಗಾಗಿ ಸಾಧ್ಯವಾದ ಎಲ್ಲ ಕಸರತ್ತುಗಳನ್ನೂ ಮಾಡುತ್ತಿದ್ದಾರಂತೆ ಅಭಿಷೇಕ್.

'ಅಯೋಗ್ಯ', 'ಮದಗಜ' ಖ್ಯಾತಿಯ ನಿರ್ದೇಶಕ ಎಸ್. ಮಹೇಶ್ ಕುಮಾರ್ ಸಿನಿಮಾಗೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಸಿನಿಮಾದ ಫಸ್ಟ್‌ಲುಕ್ ಪೋಸ್ಟರ್ ಈಗಾಗಲೇ ಬಿಡುಗಡೆಗೊಂಡಿದ್ದು, ಚಿತ್ರದ ಶೀರ್ಷಿಕೆಯನ್ನು ಚಿತ್ರತಂಡ ಬಹಿರಂಗಪಡಿಸಿಲ್ಲ.

ಸದ್ಯಕ್ಕೆ ಈ ಹೊಸ ಸಿನಿಮಾಗೆ 'ಎಎ04', ಎಂದರೆ ಅಭಿಷೇಕ್ ಅಂಬರೀಶ್ ನಾಲ್ಕನೇ ಚಿತ್ರ ಎಂದಷ್ಟೇ ಕರೆಯಲಾಗಿದೆ.